ಅಳವಡಿಸಿಕೊಳ್ಳಲು ರೈತರಿಗೆ ಪ್ರೋತ್ಸಾಹ ನೀಡುವುದು. ಕೃಷಿ ವರಮಾನವು ವಿಶೇಷವಾಗಿ ವಿಪತ್ತೊದಗಿದ ವರ್ಷಗಳಲ್ಲಿ ಸ್ಥಿರವಾಗಿರುವಂತೆ ಮಾಡಲು ನೆರವಾಗುವುದಕ್ಕೆ ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ.

**ಶೇಕಡ 3ರ ಬಡ್ಡಿದರದ ಸಾಲ ಸೌಲಭ್ಯ**

**510 (1015) ಶ್ರೀ ಹ್ಯಾರಿಸ್ ಎನ್ ಎ. (ಶಾಂತಿನಗರ) :** ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶೇಕಡಾ 3ರ ಬಡ್ಡಿ ದರದ ಸಾಲ ಸೌಲಭ್ಯದ ವಿವರಗಳೇನು? ಈ ಯೋಜನೆಯಡಿ ನೀಡಿದ ಸಾಲದ ಒಟ್ಟು ಮೊತ್ತವೆಷ್ಟು?

ಆ) ಈ ಸಾಲ ಸೌಲಭ್ಯದ ಜಿಲ್ಲಾವಾರು ಫಲಾನುಭವಿಗಳ ಸಂಖ್ಯೆ ಎಷ್ಟು?

ಇ) ಘೋಷಿತ ಯೋಜನೆಯು ಸೂಕ್ತ ರೀತಿಯಲ್ಲಿ ಫಲಾನುಭವಿಗಳಿಗೆ ಲಭ್ಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಬಂದಿದ್ದಲ್ಲಿ, ಈ ಯೋಜನೆಯಲ್ಲಿನ ಲೋಪದೋಷಗಳ ನಿವಾರಣೆಗಾಗಿ ಸರ್ಕಾರದ ಕ್ರಮಗಳೇನು?

**ಶ್ರೀ ಲಕ್ಷ್ಮಣ ಸವದಿ (ಸಹಕಾರ ಸಚಿವರು) :**

ಅ) 2008–09 ನೇ ಸಾಲಿನಿಂದ ಶೇಕಡ 3 ರ ಬಡ್ಡಿ ದರದಲ್ಲಿ ಕೃಷಿ ಸಾಲವನ್ನು ವಿತರಿಸಲಾಗಿದೆ. 2008–09ನೇ ಸಾಲಿನಲ್ಲಿ ರೂ.3576.98 ಕೋಟಿಗಳು ಹಾಗೂ 2009–10 ನೇ ಸಾಲಿನಲ್ಲಿ (ದಿ: 1–4–2009 ರಿಂದ 28–02–2010 ರವರೆಗೆ) ರೂ.3099.40 ಕೋಟಿಗಳನ್ನು ಕೃಷಿ ಸಾಲವನ್ನು ನೀಡಲಾಗಿದೆ. ಈ ಯೋಜನೆಯ ಮುಖ್ಯ ವಿವರಗಳು ಈ ಕೆಳಕಂಡಂತಿದೆ.

1) ಈ ಯೋಜನೆಯಡಿಯಲ್ಲಿ ಶೇ.3 ರ ಬಡ್ಡಿ ದರವು ದಿ: 1–4–2009 ರಿಂದ ವಿವಿಧ ಕೃಷಿ ಪತ್ತಿನ ಸಹಕಾರ ಸಂಸ್ಥೆಗಳಿಂದ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲ ಪಡೆದಿರುವಂತಹ ರೈತರುಗಳಿಗೆ ಅನ್ವಯವಾಗುತ್ತದೆ.

2) ಈ ಯೋಜನೆಯು ಸಹಕಾರ ಕೃಷಿ ಪತ್ತಿನ ಸಂಸ್ಥೆಗಳು ನೀಡುವ ಕೃಷಿಯೇತರ ಸಾಲಗಳಿಗೆ ಅನ್ವಯಿಸುವುದಿಲ್ಲ.

3) ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಪ್ರಾಥಮಿಕ ಕೃಷಿ ಪತ್ತಿನ ಸಂಘಗಳಿಗೆ ಶೇಕಡ 1ರ ಬಡ್ಡಿ ದರದಲ್ಲಿ ಸಾಲವನ್ನು ಒದಗಿಸತಕ್ಕದ್ದು.

4) ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಅಂತಿಮ ವಾಗಿ ರೈತರಿಗೆ ಶೇಕಡ 3 ರ ಬಡ್ಡಿ ದರದಲ್ಲಿ ಸಾಲಗಳನ್ನು ಒದಗಿಸತಕ್ಕದ್ದು.

5) ಈ ಯೋಜನೆಯಡಿಯಲ್ಲಿ ಸರ್ಕಾರದ ಬದ್ಧತೆಯು ಸಾಲಗಳ ಅವಧಿಗೆ ಮಾತ್ರ ಅಂದರೆ ಸಾಲ ಪಡೆದ ದಿನಾಂಕದಿಂದ ರೈತರು ಸಾಲ ಮರುಪಾವತಿಸಬೇಕಾದ ದಿನಾಂಕದವರೆಗೆ ಸೀಮಿತವಾಗಿರುತ್ತದೆ. ರೈತರು ಸಕಾಲದಲ್ಲಿ ಸಾಲ ಮರುಪಾವತಿಸದೆ ಸುಸ್ತಿಯಾದಲ್ಲಿ, ಸುಸ್ತಿಯಾದ ರೈತರು ಸುಸ್ತಿಯಾದ ದಿನಾಂಕದಿಂದ ಸಹಕಾರ ಸಂಘಗಳು ವಿಧಿಸುವ ಸಾಮಾನ್ಯ ಬಡ್ಡಿ ದರ ಮತ್ತು ಇತರ ಖರ್ಚುಗಳ ಸಹಿತ ಕೃಷಿ ಸಾಲ ಮರುಪಾವತಿಸಲು ಜವಾಬ್ದಾರರಾ ಗಿರುತ್ತಾರೆ. ಈ ಯೋಜನೆಯಡಿ ಬಡ್ಡಿ ಸಹಾಯಧನವು ಪೂರ್ಣವಾಗಿ ಮರುಪಾವತಿಯಾಗುವ ಸಾಲಗಳಿಗೆ ಮಾತ್ರ ದೊರೆಯಲಿದೆ ಮತ್ತು ಸಾಲವು ರೈತರಿಗೆ ಬಿಡುಗಡೆಯಾದ ದಿನಾಂಕದಿಂದ ಪ್ರಾರಂಭವಾಗಿ ಸಾಲ ಮರುಪಾವತಿಯ ಗಡುವಿನ ದಿನಾಂಕದವರೆಗೆ ಅಥವಾ ಪೂರ್ಣವಾಗಿ ಸಾಲ ಮರುಪಾವತಿಯಾದ ದಿನಾಂಕ ಇದರಲ್ಲಿ ಯಾವುದು ಮೊದಲೋ ಆ ಅವಧಿಗೆ ಬಡ್ಡಿ ಸಹಾಯಧನವು ಅನ್ವಯಿಸುತ್ತದೆ. ಈ ಸಾಲಗಳು ಸುಸ್ತಿಯಾದರೂ ಕೂಡ ಸರ್ಕಾರದ ಬದ್ಧತೆಯು ಸಾಲದ ಅವಧಿಗೆ ಸೀಮಿತ ವಾಗಿರುತ್ತದೆ.

6) ಈ ಯೋಜನೆಯು ವಸೂಲಾತಿಗೆ ಜೋಡಣೆಯಾಗಿರುವ ಪ್ರಯುಕ್ತ ಕೃಷಿ ಪತ್ತಿನ ಸಹಕಾರ ಸಂಘಗಳು/ ಬ್ಯಾಂಕುಗಳು ಬಡ್ಡಿ ಸಹಾಯಧನವನ್ನು ಕೃಷಿ ಸಾಲಗಳ ವಸೂಲಾತಿಯ ಪ್ರಮಾಣವನ್ನು ಆಧರಿಸಿ ತ್ರೈಮಾಸಿಕ ಕ್ಲೇಮು ಬಿಲ್ಲುಗಳನ್ನು

ಸಿದ್ಧಪಡಿಸಿ ನಿಯೋಜಿಸಲ್ಪಟ್ಟಿರುವ ಲೆಕ್ಕಪರಿಶೋಧಕರಿಂದ ಪ್ರಮಾಣೀಕರಿಸಿದ ನಂತರ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರಿಂದ ದೃಢೀಕರಿಸಿ ನಿಬಂಧಕರ ಮಂಜೂರಾತಿಗಾಗಿ ಅಪೆಕ್ಸ್ ಬ್ಯಾಂಕಿಗೆ ಬೇಡಿಕೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.

ಆ) ರಾಜ್ಯದಲ್ಲಿ 2008–09 ನೇ ಸಾಲಿನಲ್ಲಿ ಒಟ್ಟು 12,96,017 ರೈತರು ಮತ್ತು 2009–10 ನೇ ಸಾಲಿನಲ್ಲಿ ಅಂದರೆ ದಿ: 1–4–2009 ರಿಂದ 28–2–2010 ರ ವರೆಗೆ 10,96,086 ಜನ ರೈತರಿಗೆ ಸಹಕಾರ ಸಂಘಗಳ ಮತ್ತು ಡಿ.ಸಿ.ಸಿ. ಬ್ಯಾಂಕುಗಳ ಮೂಲಕ ಕೃಷಿ ಸಾಲ ವಿತರಿಸಲಾಗಿದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ–1 ಮತ್ತು ಅನುಬಂಧ–2 ರಲ್ಲಿ ಲಗತ್ತಿಸಿದೆ.

ಇ) ಘೋಷಿತ ಯೋಜನೆಯು ಸೂಕ್ತ ರೀತಿಯಲ್ಲಿ ಫಲಾನುಭವಿಗಳಿಗೆ ಲಭ್ಯವಾಗುತ್ತಿದೆ.

ಈ) ಅನ್ವಯಿಸುವುದಿಲ್ಲ.

**ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಹ್ಯಾರೀಸ್ ಎನ್.ಎ. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1015 ಕ್ಕೆ ಅನುಬಂಧ–1**

**ಅಲ್ಪಾವಧಿ ಮತ್ತು ಮಧ್ಯಮಾವಧಿ ಕೃಷಿ ಸಾಲಗಳ ವಿತರಣೆ ವಿವರಗಳು –3%**

| ಕ್ರ ಸಂ. | ಜಿಲ್ಲೆಯ ಹೆಸರು | 2008–09 | 2009–10 | ಒಟ್ಟು |
|---|---|---|---|---|
| | | ಸಂಖ್ಯೆ | ಸಂಖ್ಯೆ | ಸಂಖ್ಯೆ |
| 1 | 2 | 3 | 4 | 5 |
| 1 | ಬೆಂಗಳೂರು | 34224 | 44100 | 78324 |
| 2 | ಕೋಲಾರ | 5 | 925 | 930 |
| 3 | ತುಮಕೂರು | 26622 | 37342 | 63964 |
| 4 | ಚಿತ್ರದುರ್ಗ | 16315 | 20320 | 36635 |
| 5 | ಶಿವಮೊಗ್ಗ | 49386 | 52581 | 101967 |
| 6 | ದಾವಣಗೆರೆ | 53701 | 50849 | 104550 |

| | | | | |
|---|---|---|---|---|
| 7 | ಮೈಸೂರು ಮತ್ತು ಚಾಮರಾಜನಗರ | 26729 | 28442 | 55171 |
| 8 | ಕೊಡಗು | 22590 | 26566 | 49156 |
| 9 | ಮಂಡ್ಯ | 48827 | 34205 | 83032 |
| 10 | ಹಾಸನ | 43508 | 33945 | 77453 |
| 11 | ಚಿಕ್ಕಮಗಳೂರು | 7190 | 7436 | 14626 |
| 12 | ಮಂಗಳೂರು ಮತ್ತು ಉಡುಪಿ | 71882 | 69722 | 141604 |
| 13 | ಬೆಳಗಾಂ | 283885 | 155644 | 439529 |
| 14 | ಬಿಜಾಪುರ | 124472 | 65891 | 190363 |
| 15 | ಬಾಗಲಕೋಟೆ | 141917 | 108397 | 250314 |
| 16 | ಧಾರವಾಡ, ಗದಗ ಮತ್ತು ಹಾವೇರಿ | 29366 | 29537 | 58903 |
| 17 | ಉತ್ತರ ಕನ್ನಡ | 49357 | 58227 | 107584 |
| 18 | ಗುಲ್ಬರ್ಗಾ | 98435 | 41844 | 140279 |
| 19 | ರಾಯಚೂರು ಮತ್ತು ಕೊಪ್ಪಳ | 44322 | 41327 | 85649 |
| 20 | ಬೀದರ್ | 96017 | 145722 | 241739 |
| 21 | ಬಳ್ಳಾರಿ | 27267 | 30336 | 57603 |
| | ಒಟ್ಟು | **1296017** | **1083358** | **2379375** |

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಹ್ಯಾರೀಸ್ ಎನ್.ಎ. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1015 ಅನುಬಂಧ–2

ದೀರ್ಘಾವಧಿ ಕೃಷಿ ಸಾಲಗಳ ವಿತರಣೆ ವಿವರಗಳು – 3%

| ಕ್ರ. ಸಂ. | ಜಿಲ್ಲೆಯ ಹೆಸರು | 2008–09 | 2009–10 | ಒಟ್ಟು |
|---|---|---|---|---|
| | | ಸಂಖ್ಯೆ | ಸಂಖ್ಯೆ | ಸಂಖ್ಯೆ |
| 1 | 2 | 3 | 4 | 5 |
| 1 | ಬೆಂಗಳೂರು | 427 | 329 | 756 |
| 2 | ಕೋಲಾರ | 748 | 228 | 976 |
| 3 | ತುಮಕೂರು | 1438 | 910 | 2348 |
| 4 | ಚಿತ್ರದುರ್ಗ | 193 | 24 | 217 |
| 5 | ಶಿವಮೊಗ್ಗ | 2693 | 1883 | 4576 |
| 6 | ದಾವಣಗೆರೆ | 547 | 276 | 823 |
| 7 | ಮೈಸೂರು | 623 | 434 | 1057 |
| 8 | ಚಾಮರಾಜನಗರ | 132 | 119 | 251 |
| 9 | ಕೊಡಗು | 372 | 272 | 644 |
| 10 | ಮಂಡ್ಯ | 795 | 305 | 1100 |
| 11 | ಹಾಸನ | 2108 | 1232 | 3340 |
| 12 | ಚಿಕ್ಕಮಗಳೂರು | 2931 | 733 | 3664 |
| 13 | ಮಂಗಳೂರು | 2090 | 1809 | 3899 |
| 14 | ಉಡುಪಿ | 634 | 475 | 1109 |
| 15 | ಬೆಳಗಾಂ | 651 | 391 | 1042 |
| 16 | ಬಿಜಾಪುರ | 519 | 318 | 837 |
| 17 | ಬಾಗಲಕೋಟೆ | 600 | 388 | 988 |
| 18 | ಧಾರವಾಡ, | 648 | 203 | 851 |
| 19 | ಗದಗ | 150 | 39 | 189 |
| 20 | ಹಾವೇರಿ | 378 | 235 | 613 |
| 21 | ಉತ್ತರ ಕನ್ನಡ | 3887 | 1831 | 5718 |
| 22 | ಗುಲ್ಬರ್ಗಾ | 185 | 32 | 217 |

| | | | | |
|---|---|---|---|---|
| 23 | ರಾಯಚೂರು | 42 | 4 | 46 |
| 24 | ಕೊಪ್ಪಳ | 95 | 6 | 101 |
| 25 | ಬೀದರ್ | 82 | 23 | 105 |
| 26 | ಬಳ್ಳಾರಿ | 359 | 150 | 509 |
| | **ಒಟ್ಟು** | **23327** | **12649** | **35976** |

**ದಾಳಿಂಬೆ ಬೆಳೆಗಳು**

**511 (634) ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) :** ಮಾನ್ಯ ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ದಾಳಿಂಬೆ ಬೆಳೆ ಬೆಳೆಯುವ ಜಿಲ್ಲೆಗಳು ಎಷ್ಟು ಹಾಗೂ ಯಾವುವು (ವಿವರ ನೀಡುವುದು);

ಆ) ಈ ದಾಳಿಂಬೆ ಬೆಳೆಗೆ ದುಂಡಾಣು ರೋಗವು ಹರಡಿರುವು ದರಿಂದ ರಾಜ್ಯದ ರೈತರಿಗೆ ಬಹಳ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ದುಂಡಾಣು ರೋಗವನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಈ) ಈ ರೋಗವನ್ನು ತಡೆಗಟ್ಟಲು ಕೇಂದ್ರ ಸರ್ಕಾರ ವಿಶೇಷ ಪ್ಯಾಕೇಜ್ ಘೋಷಣೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ;

ಉ) ಹಾಗಿದ್ದಲ್ಲಿ, ಈ ಯೋಜನೆಯು ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವುದೇ;

ಊ) ಹಾಗಿದ್ದಲ್ಲಿ, ಈ ರೋಗವನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

**ಶ್ರೀ ಉಮೇಶ್ ವಿ. ಕತ್ತಿ (ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು) :**

ಅ) ಹದಿಮೂರು.

ಅವುಗಳ ವಿವರಗಳು ಕೆಳಗಿನಂತಿವೆ :